**IN THE COURT OF THE SENIOR CIVIL JUDGE AND JMFC, SOMWARPETE**

**CC No. 268/2026**

ಪ್ರಕರಣವನ್ನು ಲೋಕ ಅದಾಲತ್ ನಲ್ಲಿ ಕರೆಯಲಾಯಿತು. ಆರೋಪಿ ಹಾಜರಿದ್ದಾರೆ. 1 ನೇ ಆರೋಪಿ ಪರ ಸಿ. ಎಸ್. ಪ್ರತಾಪ ವಕೀಲರು ವಕಾಲತ್ತನ್ನು ಸಲ್ಲಿಸಿದ್ದು, ಮತ್ತು ಆರೋಪಿ ಪರವಾಗಿ ತಪ್ಪನ್ನು ಒಪ್ಪಿಕೊಳ್ಳುವುದಾಗಿ ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

1 ನೇ ಆರೋಪಿ ಮೇಲೆ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವ ಕಾಯ್ದೆ ಕಲಂ 11 ರ ಅಡಿಯಲ್ಲಿ ಆಪಾದನೆಯನ್ನು ರಚಿಸಿ 1 ನೇ ಆರೋಪಿ ಪರ ವಕೀಲರಿಗೆ ಆಪಾದನೆಯನ್ನು ಓದಿ ಹೇಳಿ ವಿವರಿಸಲಾಯಿತು. ಆರೋಪಿಯು ತಮ್ಮ ಮೇಲಿನ ಆಪಾದನೆಯನ್ನು ವಕೀಲರ ಮೂಲಕ ಒಪ್ಪಿಕೊಳ್ಳುವುದಾಗಿ ಮತ್ತು ಆಪಾದನೆ ಒಪ್ಪಿಕೊಳ್ಳಲು ಯಾವುದೇ ಒತ್ತಡವಿಲ್ಲವೆಂದು ತಾವು ವಕೀಲರ ಮೂಲಕ ಆಪಾದನೆಯನ್ನು ಒಪ್ಪಿಕೊಳ್ಳುವುದಾಗಿ ಹೇಳಿದ್ದು, 1 ನೇ ಆರೋಪಿಯ ತಪ್ಪೊಪ್ಪಿಗೆಯನ್ನು ವಕೀಲರ ಮೂಲಕ ಸ್ವೀಕರಿಸುವುದು ಸೂಕ್ತವೆಂದು ತೀರ್ಮಾನಿಸಿ ಕೆಳಗಿನಂತೆ-

**ಆದೇಶ**

ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 1 ನೇ ಆರೋಪಿಯನ್ನು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವ ಕಾಯ್ದೆ ಕಲಂ 11 ರ ಅಡಿಯಲ್ಲಿ ಅಡಿಯಲ್ಲಿ ತಪ್ಪಿತಸ್ಥನೆಂದು ಶಿಕ್ಷಿಸಲಾಗಿದೆ.

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವ ಕಾಯ್ದೆ ಕಲಂ 11 ರ ಅಡಿಯಲ್ಲಿನ ಅಪರಾಧಕ್ಕಾಗಿ 1 ನೇ ಆರೋಪಿಗೆ 100/- ರೂಪಾಯಿಗಳ ದಂಡವನ್ನು ಪಾವತಿಸುವಂತೆ, ಸದರಿ ದಂಡ ಪಾವತಿಸಲು ತಪ್ಪಿದ್ದಲ್ಲಿ 10 ದಿನಗಳ ಸಾದಾ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸುವಂತೆ ಆದೇಶಿಸಲಾಗಿದೆ.

ಸಹಿ/–

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸೋಮವಾರಪೇಟೆ.